**<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಬನಹಟ್ಟಿ</u>**

**<u>ಸಿ.ಸಿ.ನಂ.01/2021</u>**

1) ಕರ್ನಾಟಕ ಸರಕಾರ

.....ಫಿರ್ಯಾದಿದಾರ

– ವಿರುದ್ಧ –

1) ವಿಶಾಲ ಜ್ಞಾನೇಶ್ವರ ಸರ್ವದೆ,
ಸಾಃ ರಬಕವ.

......ಆರೋಪಿ

**<u>– ಆಪಾದನೆ –</u>**

ನಾನು ಶ್ರೀಮತಿ.ಶುಷ್ಮ ಟಿ.ಸಿ. ಬಿ.ಕಾಂ., ಎಲ್.ಎಲ್.ಬಿ., ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ ದಂಡಾಧಿಕಾರಿಗಳು ಬನಹಟ್ಟಿ ತಾ:ರಬಕವಿ-ಬನಹಟ್ಟಿ ಹೊರೆಸುವ ಆಪಾದನೆ ಏನೆಂದರೆ,

ಬನಹಟ್ಟಿ ಪೋಲಿಸ ಠಾಣಾ ಹದ್ದಿ ಪೈಕಿ, ಚಿಮ್ಮಡ ಗ್ರಾಮದ ದೊಡ್ಡ ಕೆನಾಲ ಸಮೀಪ ಸೈಯದ ಸಿಕಂದರ ರಾಂಪೂರ ಇವರ ಜಮೀನದ ಹತ್ತಿರ ಚಿಮ್ಮಡ-ಮಹಾಲಿಂಪುರ ಡಾಂಬರ ರಸ್ತೆಯ ಮೇಲೆ ದಿನಾಂಕ 01-09-2020 ರಂದು 20-30 ಗಂಟೆ ಸುಮಾರಿಗೆ ನೀನು ನಡೆಸುತ್ತಿದ್ದ ಹಿರೋ ಹೊಂಡಾ ಸಿಡಿ ಡಿಲಕ್ಸ್ ಮೋಟಾರ್ ಸೈಕಲ್ ನಂಃ ಕೆಎ-27 ಇಎ-6752 ನೇದ್ದನ್ನು ಮಹಾಲಿಂಗಪೂರ ಕಡೆಯಿಂದ ಚಿಮ್ಮಡ ಕಡೆಗೆ ಅತೀ ಜೋರಾಗಿ ನಿರ್ಲಕ್ಷತನದಿಂದ ಚಾಲನೆ ಮಾಡಿಕೊಂಡು ಬಂದು, ಚಿಮ್ಮಡ ಕಡೆಯಿಂದ ಮಹಾಲಿಂಗಪೂರ ಕಡೆಗೆ ನಿನ್ನ ಎಡಬಾಜು ಹಿರೋ ಹೊಂಡಾ ಸಿಡಿ ಡಿಲಕ್ಸ್ ಮೋಟಾರ ಸೈಕಲ್ ನಂ.ಕೆಎ-25 ಇಎ-2629 ನೇದ್ದನ್ನು ಚಾಲನೆ ಮಾಡಿಕೊಂಡು ಹೋಗುತ್ತಿದ್ದ ಸಾಕ್ಷಿದಾರ ನಂ.7)ಸುಭಾಶ ಬಡ್ಡೂರ ಇವರಿಗೆ ಹಾಯಿಸಿ ಅಪಘಾತಪಡಿಸಿ, ಅವರ ಬಲ ಮೊಣಕಾಲು, ಬಲಗಾಲಿನ ಪಾದಕ್ಕೆ ಮತ್ತು ಅಲ್ಲಲ್ಲಿ ಸಾದಾ ವ ಭಾರಿ ಗಾಯ ಒಳಪೆಟ್ಟುಪಡಿಸಿದ್ದಲ್ಲದೇ, ನೀನೂ ಸಹ ಬಲಗಾಲಿಗೆ ಮತ್ತು ಅಲ್ಲಲ್ಲಿ ಭಾರಿ ಗಾಯ ಒಳಪೆಟ್ಟು ಹೊಂದಿದ ಅಪರಾಧ. ಆ ಮೂಲಕ ಭಾರತ ದಂಡ ಸಂಹಿತೆ ಕಲಂ.279, 337, 338 ರ ಅಡಿಯಲ್ಲಿ ಅಪರಾಧ ಎಸಗಿರುತ್ತೀ.

ಪ್ರಶ್ನೆ-1) ಈಗ ಓದಿ ಹೇಳಲಾದ ಆರೋಪಣೆ ತಿಳಿಯಿತೆ ?
ಉತ್ತರಃ-

ಪ್ರಶ್ನೆ-2) ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಲು ಬಯಸುವಿರೊ ?
ಉತ್ತರಃ-

ಮೇಲೆ ಹೇಳಲಾದ ಆರೋಪಣೆಯನ್ನು ಆರೋಪಿತನಿಗೆ ತಿಳಿಯುವ ಭಾಷ್ಷೆಯಲ್ಲಿ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಅವರ ಭಾಷೆಯಲ್ಲಿ ಬರೆದುಕೊಳ್ಳಲಾಯಿತು ಎಂದು ದೃಢೀಕರಿಸಲಾಗಿದೆ.

ಸ್ಥಳಃ ಬನಹಟ್ಟಿ. Sd/-

ದಿನಾಂಕಃ 03-09-2021. ಪ್ರ. ದ. ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ